**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :22 ಸಿಡಬ್ಲು :33

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಮಿಲನ ದೇವನ್ನವರ |
| ತಂದೆಯ ಹೆಸರು | : | ಶ್ರೀ.ಬಾಬು ದೇವನ್ನವರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 14-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮುಗಳಖೋಡದ ಸರ್ಕಾರಿ ಆಸ್ಪತ್ರೆ ಬಳಿ ನಮ್ಮ ಮನೆ ಇದೆ. ನಾನು ದೇವನ್ನವರ ಓಣಿಯಲ್ಲಿದ್ದೇನೆ. ಚಾಸಾಃ 1 ಬಸಪ್ಪ, ಮಾದರ ಓಣಿಯಲ್ಲಿದ್ದಾರೆ. ಚಾಸಾಃ 8 ರಿಂದ ಚಾಸಾಃ 32 ರವರೆಗೆ ನನಗೆ ಪರಿಚಯ ಇರುವುದಿಲ್ಲ. ಚಾಸಾಃ 34 ಮಲ್ಲು ಕುರಾಡೆ ನನ್ನ ಅಣ್ಣನ ಮಗ. ಚಾಸಾಃ 37 ಯಮನಪ್ಪ ನನ್ನ ಅಣ್ಣ, ಅವರು ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾಃ 36 ಮಹಾಂತೇಶ ಗುಳಸಂಗಿ ನನಗೆ ಗೊತ್ತಿರುವುದಿಲ್ಲ. ಚಾಸಾಃ 39 ಸಯ್ಯದ್ ನದಾಫ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದು ನನಗೆ ಗೊತ್ತಿರುತ್ತಾರೆ. ಚಾಸಾಃ 40, ಚಾಸಾಃ 41, ಚಾಸಾಃ 42 ನನಗೆ ಗೊತ್ತಿರುವುದಿಲ್ಲ. ಚಾಸಾಃ 43 ನನ್ನ ಅಣ್ಣ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನನಗೆ ಪರಿಚಯ ಇರುತ್ತಾರೆ ಮತ್ತು ಉಳಿದ ಆರೋಪಿತರು ಸಹ ನನಗೆ ಗೊತ್ತಿರುತ್ತಾರೆ.

2. ನಮ್ಮ ಊರಿನಲ್ಲಿ ಮಾದರ ಸಮಾಜದವರಿಗೂ, ಜೈನ ಸಮುದಾಯದವರಿಗೂ ಯಾವ ವಿಚಾರದಲ್ಲಿ ಜಗಳ ಇತ್ತು ಎನ್ನುವುದು ನನಗೆ ಗೊತ್ತಿರುವುದಿಲ್ಲ. ವಿವಾದಿತ ಸ್ಥಳದಲ್ಲಿ ಬಾಬಣ್ಣವರ ಮನೆತನದವರು ಕಟ್ಟಡ ನಿರ್ಮಾಣ ಮಾಡುವ ಸಮಯದಲ್ಲಿ ನಾನು ಇರಲಿಲ್ಲ. ಸ್ಥಳದಲ್ಲಿ ಏನು ಘಟನೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ, ನಾನು ನೋಡಿರುವುದಿಲ್ಲ.

3. 8 ವರ್ಷಗಳ ಹಿಂದೆ ನಾನು ನಾರಗೊಂಡ ಆಸ್ಪತ್ರೆಗೆ ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಏನೂ ತೊಂದರೆ ಆಗಿರಲಿಲ್ಲ, ಏನೂ ಗಾಯ ಆಗಿರಲಿಲ್ಲ, ನಾನು ಏಕೆ ಹೋಗಲಿ ಎಂದು ಕೇಳಿದ್ದಾರೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

4. ಘಟನೆಗೆ ಸಂಬಂಧಿಸಿದಂತೆ ಎರಡು ದೂರುಗಳು ದಾಖಲಾಗಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಎರಡೂ ಪ್ರಕರಣಗಳಲ್ಲಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿಯಾಗಿದ್ದು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

"ನಮ್ಮೂರಿನ ಸರ್ಕಾರಿ ಆಸ್ಪತ್ರೆಗೆ ಹೋಗುವ ರಸ್ತೆಯಲ್ಲಿ ಇರುವ ಯಲ್ಲಮ್ಮನ ಪಾದುಗಟ್ಟೆ ಇರುವ ಸ್ಥಳದ ವಿಚಾರವಾಗಿ ನಮ್ಮೂರಿನ ಜೈನ ಸಮುದಾಯದವರಿಗೂ, ಮಾದರ ಸಮಾಜದವರಿಗೂ ವ್ಯಾಜ್ಯ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ನಮ್ಮೂರಿನ ಜೈನ ಸಮುದಾಯದವರಾದ ರಾಹುಸಾಬ ಬಾಬಣ್ಣವರ ಮತ್ತು ಅವರ ಮನೆಯವರು ಆ ಜಾಗೆ

ತಮ್ಮದು ಇರುತ್ತದೆ ಅಂತಾ ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ್ದರಿಂದ ಮಾದಿಗ ಸಮುದಾಯದ ಜನರು ಪುರಸಭೆಯಲ್ಲಿ ತಕರಾರು ನೀಡಿದ್ದರಿಂದ ಅಲ್ಲಿ ಕೆಲಸ ಮಾಡುವುದನ್ನು ಬಂದ್ ಮಾಡಿದ್ದರು " ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-17 ಎಂದು ಗುರುತಿಸಲಾಯಿತು.

2. "ದಿನಾಂಕಃ 26-08-2017 ರಂದು ಮುಂಜಾನೆ 9:00 ಗಂಟೆ ಸಮಯಕ್ಕೆ ನೇಮಿನಾಥ ಲಕ್ಷ್ಮಣ ಬಾಬನ್ನ ಮತ್ತು ಶ್ರೀಕಾಂತ ಮಾರ್ತಾಂಡ ಬಾಬನ್ನ ರವರು ಮತ್ತು ಅವರ ಮನೆಯವರು ಸರ್ಕಾರಿ ಆಸ್ಪತ್ರೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಇರುವ ಖಾಲಿ ಜಾಗದಲ್ಲಿ ಕಟ್ಟಡ ಕೆಲಸ ನಿಂತಿದ್ದ ಸ್ಥಳದಲ್ಲಿ ಪುನಃ ಕಟ್ಟಡ ಕಟ್ಟುವ ಸಲುವಾಗಿ ಕೆಲಸ ಮಾಡಲು ನನಗೆ ಮತ್ತು ಮಲ್ಲು ಲಕ್ಷ್ಮಣ ಕುರಾಡೆ ಇವರಿಗೆ ಕೆಲಸಕ್ಕೆ ಕರೆದಿದ್ದರು ಎನ್ನುವುದು ಸರಿ. ಆದರೆ ನಾನು ಆ ದಿನ ಕೆಲಸಕ್ಕೆ ಹೋಗಿರುವುದಿಲ್ಲ. ಆ ದಿನ ನಾನು ಆ ಸ್ಥಳದಲ್ಲಿ ಕೆಲಸಕ್ಕೆ ಹೋಗಿದ್ದೇನು, ಆ ಸ್ಥಳದಲ್ಲಿ ಸ್ವಚ್ಚ ಮಾಡುವ ಸಮಯದಲ್ಲಿ, ಬೆಳಗ್ಗೆ 11:00 ಗಂಟೆ ಸುಮಾರಿಗೆ ಮಾದಿಗ ಸಮಾಜದ ಚಾಸಾಃ 1 ಬಸಪ್ಪ ಮಾದರ ಹಾಗೂ ಇತರರು ಕೂಡಿಕೊಂಡು ನಮ್ಮೂರ ಪುರಸಭೆಯ ಮುಖ್ಯಾಧಿಕಾರಿಗೆ ಮತ್ತು ಅಧ್ಯಕ್ಷರಿಗೆ ಕರೆದುಕೊಂಡು ಬಂದರು, ಪುರಸಭೆಯ ಮುಖ್ಯಾಧಿಕಾರಿಗಳು ಬಾಬನ್ನ ಅವರಿಗೆ ವಿಚಾರಿಸಿ ಕಟ್ಟಡ ಕಟ್ಟಬೇಡಿರಿ ಅಂದಾಗ ಅಲ್ಲಿದ್ದ ಜೈನ ಸಮಾಜದ ಬಾಬನ್ನ ಅವರ ಮನೆಯವರಿಗೂ ಮತ್ತು ಮಾದಿಗ ಸಮಾಜದ ಬಸಪ್ಪ ಮಾದರ ಇವರ ಮನೆಯವರಿಗೂ ನಡುವೆ ಬಾಯಿಗೆ ಬಾಯಿ ಮಾತು ಬೆಳೆದು ಎರಡೂ ಪಾರ್ಟಿ ಜನರು ಒಬ್ಬರ ಮೇಲೊಬ್ಬರು ಬಡೆದಾಡುತ್ತಾ ಕಲ್ಲುಗಳನ್ನು ಒಗೆಯುವುದು, ಕಟ್ಟಿಗೆ ಮತ್ತು ಚಡಿಯಿಂದ ಹೊಡೆದಾಡಲು ಶುರುಮಾಡಿದರು. ಆ ಸಮಯದಲ್ಲಿ ಮಾದಿಗ ಸಮಾಜದವರು ಎಸೆದ ಒಂದು ಕಲ್ಲು ನನ್ನ ತಲೆಗೆ ತಗುಲಿ ಗಾಯವಾಗಿರುತ್ತದೆ. ಆ ಬಗ್ಗೆ ನಾನು ನಾರಗೊಂಡ ಆಸ್ಪತ್ರೆಯಲ್ಲಿ ಉಪಚಾರ ಹೊಂದಿರುತ್ತೇನೆ " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-17 [ಎ] ಎಂದು ಗುರುತಿಸಲಾಯಿತು.

3. ಘಟನೆಯಿಂದ ತಮ್ಮ ತಲೆಗೆ ಪೆಟ್ಟು ಬಿದ್ದು ಮೂಳೆ ಮುರಿದಿತ್ತು ಎನ್ನುವುದಕ್ಕೆ ಸಾಕ್ಷಿಯು ನಾನು ಗಾಡಿಯ ಮೇಲಿಂದ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ನಾನು ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ಆ ರೀತಿ ಚಿಕಿತ್ಸೆ ಪಡೆಯುವಾಗ ಕಲ್ಲಿನಿಂದ ಹಲ್ಲೆ ಮಾಡಿದ್ದರಿಂದ ನನಗೆ ಪೆಟ್ಟಾಗಿದೆ ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

4. ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದು, ಘಟನೆಯಲ್ಲಿ ಗಾಯಗೊಂಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ ಹಾಗೂ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.